**<u>ದಿನಾಂಕಃ 24.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ- 1ಮತ್ತು 2 ನೇ ಪ್ರತಿವಾದಿ ಪರ ಶ್ರೀ ಕೆ.ಟಿ.ಟಿ. ವಕೀಲರಿಂದ</u>**

1) ಶಿವ್ರೋಜೀರಾವ್ ನಮ್ಮ ತಂದೆಯ ತಾತ. ಸದರಿಯವರಿಗೆ 3 ಜನ ಮಕ್ಕಳು. ಸುಯೋಜಿರಾವ್ ಸೂರ್ಯವಂಶಿ ರವರು ಮೂರನೇ ಮಗ. ಸದರಿಯವರನ್ನು ನಾನು ನೋಡಿಲ್ಲ. 1985 ರಲ್ಲಿ ದಾವಾ ಷೆಡ್ಯೂಲ್ ಸ್ವತ್ತಿನ ಸರ್ವೆ ನಂಬರ್ ಅನ್ನು ತುಂಡು ತುಂಡಾಗಿ ಪ್ರತ್ಯೇಕಿಸಿ ಮಾರಾಟ ಮಾಡಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಿಕ್ಕವೆಂಕಟೇಗೌಡರ ಮಗ ಮಾಯೀಗೌಡರ ಪರಿಚಯ ನನಗೆ ಇಲ್ಲ. ದಿಃ25.01.1985 ರಲ್ಲಿ ಸುಯೋಜಿರಾವ್ ಸೂರ್ಯವಂಶಿ ರವರು ಸದರಿ ಮಾಯಿಗೌಡವರಿಗೆ 1ನಿವೇಶನವನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿವೇಶನವು ಬ್ಯಾಡರಹಳ್ಳಿ ಪಂಚಾಯಿತಿಗೆ ಸೇರಿದ್ದು ಸದರಿ ನಿವೇಶನದಲ್ಲಿ ಆಶ್ರಯ ಯೋಜನೆಯಡಿ ಮನೆ ಮಂಜೂರಾಗಿ ಸದರಿಯವರು ಮನೆ ನಿರ್ಮಾಣ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಮನೆ ಮಂಜೂರಾಗುವ ಮೊದಲು ಸದರಿ ನಿವೇಶನದ ಖಾತೆಯು ಮಾಯೀಗೌಡರ ಹೆಸರಿಗೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

2) ಸದರಿ ಖಾತೆಯ ಆಧಾರದ ಮೇಲೆ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಮಾಯೀಗೌಡರವರು ಮನೆ ನಿರ್ಮಾಣ ಮಾಡಿಕೊಂಡು ವಾಸವಾಗಿದ್ದಾರೆ ಎಂದರೆ ಗೊತ್ತಿಲ್ಲ. ನಾರಾಯಣ ರಾವ್ ಸೂರ್ಯವಂಶಿ ರವರು ಶಿವ್ರೋಜೀರಾವ್ ರವರು 2ನೇ ಮಗ. ಸದರಿಯವರ ಪತ್ನಿಯ ಹೆಸರು ಗೋರೂ ಬಾಯಿ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಎಷ್ಟು ಜನ ಮಕ್ಕಳು ಎಂದು ನನಗೆ ಗೊತಿಲ್ಲ. ಇವರಿಗೆ ಕೃಷ್ಣೋಜೀರಾವ್, ಧರ್ಮರಾವ್, ರಾಮಚಂದ್ರ ರಾವ್ ಮತ್ತು ಜೆ.ಎನ್ ಮಹದೇವ ರಾವ್ ಎಂಬ ಮಕ್ಕಳು ಎಂದರೆ ಮೊದಲನೆಯವರು ಕೃಷ್ಣೋಜೀರಾವ್ ಎಂದು ನನಗೆ ಗೊತ್ತು ಉಳಿದವರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗೋರೂ

ಬಾಯಿ ಮತ್ತು ಅವರ ಮಕ್ಕಳು ದಾವಾ ಸರ್ವೆ ನಂ.107/2 ರಲ್ಲಿ ನಿವೇಶನಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಜಗದಾಪುರ ಗ್ರಾಮದ ಸಿದ್ದೇಗೌಡರ ಹೆಂಡತಿ ಶ್ರೀಮತಿ ಸಿದ್ದಮ್ಮ ರವರಿಗೆ ಸದರಿ ಗೋರೂಬಾಯಿ ಮತ್ತು ಮಕ್ಕಳು ಒಂದು ನಿವೇಶನ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

3) 1ನೇ ಪ್ರತಿವಾದಿಯನ್ನು ನಾನು ನೋಡಿದ್ದೇನೆ. ಈ ಹಂತದಲ್ಲಿ ಸಾಕ್ಷಿಗೆ 2ನೇ ಪ್ರತಿವಾದಿ ಇರುವ ಒಂದು ಛಾಯಾಚಿತ್ರವನ್ನು ತೋರಿಸಿ ಪ್ರತಿವಾದಿಯು ನಿಂತಿರುವ ಸ್ವತ್ತು ದಾವಾ ಷೆಡ್ಯೂಲ್ ಸ್ವತ್ತು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿ ನಿಂತಿರುವ ಸ್ವತ್ತಿಗೂ ಮತ್ತುನಿಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಅದರಲ್ಲಿ ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರದಲ್ಲಿ ಕಾಣುವ ಸ್ವತ್ತಿನಲ್ಲಿ ನೀವು ಸ್ವಾಧೀನದಲ್ಲಿ ಇದ್ದೀರಾ ಎಂದರೆ ಸಾಕ್ಷಿ ಅದರಲ್ಲಿ ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ಮತ್ತೊಂದು ಛಾಯಾಚಿತ್ರವನ್ನು ತೋರಿಸಿ ಅದರಲ್ಲಿ ಕಾಣುವ ಸ್ವತ್ತು ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಫೋಟೋದಲ್ಲಿ ಒಂದು ಪಾಯ ಕಾಣಿಸುತ್ತದೆ. ಸದರಿ ಪಾಯದ ಪಕ್ಕ ಪಂಚಾಯಿತಿರವರ ಚರಂಡಿ ಮಾಡಿದ್ದಾರೆ ಎಂರದೆ ಸರಿ. ಸದರಿ ಪಾಯ ಹಾಕುವ ಸಂದರ್ಭದಲ್ಲಿ ನೀವು ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಸದರಿ ಸ್ವತ್ತು ಯಾವುದು ಎಂದು ನನಗೆ ಗೊತ್ತಿಲ್ಲಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರದಲ್ಲಿ ಕಾಣುವ ಅಡಿಪಾಯ ದಾವಾ ಸ್ವತ್ತಿನ ಸರ್ವೆ ನಂಬರ್ ನಲ್ಲಿ ಇರುವುದು ಎಂದರೆ ಆ ಸ್ವತ್ತು ಯಾವುದು ಎಂದು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ.

4) ದಾವೆ ಸಲ್ಲಿಸುವ ಸಂದರ್ಭದಲ್ಲಿ ದಾವಾ ಸ್ವತ್ತು ವ್ಯವಸಾಯದ ಭೂಮಿ ಆಗಿತ್ತು. ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಿ ದಾವಾ ಸ್ವತ್ತು ಯಾವ ರೀತಿಯ ಸ್ವತ್ತು ಎಂದು ನೋಡಿಕೊಂಡು ಬರಲು ಯಾವುದೇ ತೊಂದರೆ ಇಲ್ಲ

ಎಂದು ನುಡಿಯುತ್ತಾರೆ. ಒಂದು ವೇಳೆ ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಿದ್ದಲ್ಲಿ ದಾವಾ ಸರ್ವೆ ನಂ. 107/2 ರ ಸ್ವತ್ತನ್ನು ನಾವು ತೋರಿಸಲು ನಾವು ಸಿದ್ದರಿದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಸ್ವಾಧೀನದಲ್ಲಿ ಇರುವ ಸ್ವತ್ತುಗಳು ಅವರ ಹೆಸರಿಗೆ ಪಂಚಾಯಿತಿಯಲ್ಲಿ ಖಾತೆಯಾಗಿದೆ ಎಂದರೆ ಗೊತ್ತಿಲ್ಲ. ಸರ್ವೆ ನಂ.107/2 1 ಎಕರೇ ಪ್ರದೇಶದಲ್ಲಿ ಪ್ರತಿವಾದಿಗಳ ಖಾಲಿ ನಿವೇಶನ ಹೊರತುಪಡಿಸಿ ಉಳಿಕೆ ಪೂರಾ ಒಂದು ಎಕರೆ ಜಮೀನಿನಲ್ಲಿ ಮನೆಗಳಾಗಿವೆ ಎಂದರೆ ಸಾಕ್ಷಿ ಪ್ರತಿವಾದಿಗಳ ನಿವೇಶನ ಎಲ್ಲಿದೆ ಎಂದುಗೊತ್ತಿಲ್ಲ ಆದರೆ ನಮ್ಮ ಕೃಷಿ ಭೂಮಿ ಇದೆ ಎಂದು ನುಡಿಯುತ್ತಾರೆ.

5) ನಾನು ರೆವಿನ್ಯೂ ದಾಖಲಾತಿಗಳ ಆಧಾರದ ಮೇಲೆ ಪ್ರಸ್ತುತ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡಿ ಎಷ್ಟು ದಿನಗಳಾಗಿವೆ ಎಂದರೆ ಸಾಕ್ಷಿ ಈಗಲೂ ಸಹ ತಕರಾರು ಇರುವ ಜಾಗ ಹೊರತು ಪಡಿಸಿ ಉಳಿಕೆ ಜಾಗದಲ್ಲಿ ನಾವು ವ್ಯವಸಾಯ ಮಾಡುತ್ತಿದ್ದೇವೆ. ದಾವಾ ಸರ್ವೆ ನಂ,107/2 ರಸ್ತೆ ಪಕ್ಕದಲ್ಲಿದೇ ಎಂದರೆ ಸರಿ. ರಸ್ತೆಯ ಉದ್ದಕ್ಕೂ ಪಂಚಾಯಿತಿ ರವರು ಚರಂಡಿಯನ್ನುನಿರ್ಮಿಸಿದ್ದಾರೆ ಎಂದರೆ ಸದರಿ ಚರಂಡಿಯನ್ನು ನಮ್ಮ ಜಾಗದಲ್ಲಿಯೇ ನಿರ್ಮಿಸಿರುವುದು ಎಂದು ನುಡಿಯುತ್ತಾರೆ. ಅದರಲ್ಲಿ ಸಿಮೆಂಟ್ ರಸ್ತೆ ಸಹಾ ಆಗಿದೆ ಎಂದರೆ ಸದರಿ ರಸ್ತೆಯ ಅರ್ಧ ಭಾಗ ಸಹಾ ನಮಗೆ ಸೇರಿದ್ದು ಎಂದು ನುಡಿಯುತ್ತಾರೆ. ನಾವು 1 ಎಕರೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಚರಂಡಿ, ಸಿಮೆಂಟ್ ರಸ್ತೆ ಹಾಗೂ ನಮಗೆ ಸೇರಿದ ಜಾಗ ಕಾಣುವಂತೆ ನ್ಯಾಯಾಲಯಕ್ಕೆ ಛಾಯಾಚಿತ್ರ ನೀಡಬಹುದೇ ಎಂದರೆ ನೀಡುತ್ತೇನೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಚನ್ನಪಟ್ಟಣ.**